ಪರಿಹಾರವಾಗಲಿ ಸಿಗಲಿಲ್ಲ ಮತ್ತು ಚಿಕಿತ್ಸೆ ಕೂಡ ಆಗಿಲ್ಲ ಅವರನ್ನು ಬಿಜಾಪುರ ಬಿಎಲ್‌ಡಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಅವರು ಸಾವು-ನೋವಿನಲ್ಲಿ ಜೀವನ ಕಳೆಯುತ್ತಿದ್ದಾರೆ ಅವರಿಗೆ ಸರ್ಕಾರದ ಪರಿಹಾರ ಸಿಗಬೇಕೆನ್ನುವುದು ನನ್ನ ಇಚ್ಛೆ ಇವರು ದಲಿತ ಕುಟುಂಬದವರಾಗಿದ್ದು ಅವರಿಗೆ ಯಾವುದೇ ಆಸರೆ ಇಲ್ಲ ಆಶ್ರಯ ಸಮಿತಿ ಕಡೆಯಿಂದ ಅವರಿಗೆ ಮನೆ ಕೂಡ ಸಿಗಬೇಕೆಂಬುದು ನನ್ನ ಇಚ್ಛೆಯಾಗಿದೆ ಸರ್ಕಾರ ಅದಕ್ಕೆ ಸ್ಪಂದಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ.

19 ವಿಷಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಟೆಕ್ವಿಪ್ ಪ್ರೋಗಾಂನ್ನು ಜಾರಿಗೊಳಿಸುವ ಬಗ್ಗೆ

ಶ್ರೀ ಚರಂತಿಮರ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ, ಈ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಟೆಕ್ವಿಪ್ ಎನ್ನುವಂತಹ ಒಂದು ಪ್ರೋಗ್ರಾಮನ್ನು ದೇಶದ ತುಂಬೆಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಜಾರಿಗೊಳಿಸುತ್ತಿದ್ದಾರೆ ಈಗಾಗಲೇ ಆ ಸೌಲಭ್ಯವನ್ನು ಅನೇಕ ರಾಜ್ಯಗಳ ಇಂಜಿನಿಯರಿಂಗ್ ಕಾಲೇಜುಗಳು ಪಡೆದುಕೊಂಡಿವೆ ಆದರೆ, ಟೆಕ್ವಿಪ್ ಎಂದರೆ, ಟೆಕ್ನಿಕಲ್ ಎಜ್ಯುಕೇಷನ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಂ ಎಂದು ಆದರೆ ಅದು ನಮ್ಮ ರಾಜ್ಯದಲ್ಲಿ ಇನ್ನೂ ಕೂಡ ಜಾರಿಗೆ ಬರುತ್ತಿಲ್ಲ ಈಗಾಗಲೇ ಅನೇಕ ರಾಜ್ಯಗಳು ಈ ಸೌಲಭ್ಯವನ್ನು ಪಡೆದುಕೊಂಡಿರುವಾಗ ನಮ್ಮ ರಾಜ್ಯ ಏಕೆ ಇದರಿಂದ ವಂಚಿತವಾಗಬೇಕು? ನಮ್ಮಲ್ಲಿರುವಂತಹ ಇಂಜಿನಿಯರಿಂಗ್ ಕಾಲೇಜುಗಳಿಗೂ ಕೂಡ ಆ ಸೌಲಭ್ಯ ಸಿಗಬೇಕು ಈಗಾಗಲೇ ನ್ಯಾಷನಲ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಯೂನಿಟ್ (ಎನ್‌ಪಿಐಯು) ಎನ್ನುವಂತಹ ಸಂಸ್ಥೆ ಮುಖಾಂತರ ನಾಲ್ಕು ಲೀಡ್ ಕಾಲೇಜುಗಳು ಮತ್ತು 11 ನೆಟ್‌ವರ್ಕ್ ಕಾಲೇಜುಗಳಿಂದು ಸೆಲೆಕ್ಷನ್ ಆಗಿವೆ ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟರೆ, ಅದಕ್ಕೆ ಬಜೆಟನ್ನು ಪ್ರೊವೈಡ್ ಮಾಡಿದರೆ, ನಮ್ಮ ರಾಜ್ಯದಲ್ಲಿ ಕೂಡ ಆ ಯೋಜನೆಯನ್ನು ಜಾರಿಗೊಳಿಸಬಹುದು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ 2003ಕ್ಕೆ ಪ್ರಾರಂಭವಾಗುವ ಯೋಜನೆ, 2007ಕ್ಕೆ ಮುಕ್ತಾಯವಾಗಬೇಕು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ ಇನ್ನು ಉಳಿದಿರುವಂತಹ ಮೂರುವರೆ ವರ್ಷದಲ್ಲಿ ಇದನ್ನು ಜಾರಿಗೊಳಿಸುವುದು ಯಾವಾಗ? ಶಿಕ್ಷಣ ಮಂತ್ರಿಗಳು ಇದರ ಬಗ್ಗೆ ಬೇಗನೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನಿಮ್ಮ ಮೂಲಕ ಒತ್ತಾಯ ಮಾಡುತ್ತೇನೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ವರ್ಲ್ಡ್‌ಬ್ಯಾಂಕ್ ಏಡ್ ಅನ್ನು ಹಿಂದೆ ನಾವೆಲ್ಲಾ ಉಪಯೋಗಿಸಿಕೊಂಡಿದ್ದೇವೆ

ಆದರೂ ಸಹ ಈ ಸಾರಿ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ ಮೊನ್ನೆ ತಾನೇ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿ ನಾವು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ

20 ವಿಷಯ ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿನ ಧನ ಸಹಾಯವನ್ನು ಒದಗಿಸುವುದರ ಬಗ್ಗೆ

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಅಧ್ಯಕ್ಷರೆ, ಸಮಯದ ಅಭಾವವಿರುವುದರಿಂದ ಕ್ಷಮೆ ಯಾಚಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ ಕಾವೇರಿ ನಿಗಮದ ಬಗ್ಗೆ ಹೇಳಬೇಕಾದರೆ, ಈಗಾಗಲೇ ಕಾವೇರಿ ನಿಗಮ, ಕೃಷ್ಣ ನಿಗಮ, ಕರ್ನಾಟಕ ನೀರಾವರಿ ನಿಗಮ ಎಂದು ಅನೇಕ ನಿಗಮಗಳಿವೆ ನಾಲ್ಕೂವರೆ ವರ್ಷಗಳಲ್ಲಿ ಕೃಷ್ಣ ನಿಗಮಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ ಕರ್ನಾಟಕ ನೀರಾವರಿ ನಿಗಮಕ್ಕೂ ಕೂಡ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದೂ ಸಹ ಬಹಳ ಸಂತೋಷ ಆದರೆ ದುರಂತವೆಂದರೆ, ನಮ್ಮ ಕಾವೇರಿ ನಿಗಮಕ್ಕೆ ಇಲ್ಲಿಯವರೆಗೆ ಕೇವಲ 450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಇದು ಬಹಳ ಅನ್ಯಾಯ ನಾವು ಯಾವ ಪಾಪ ಮಾಡಿದ್ದೇವೆಂದು ನನಗನ್ನಿಸುತ್ತದೆ ಆ ನಿಗಮಕ್ಕೆ 3000 ಕೋಟಿ ರೂ ಮತ್ತು ಒಂದು ಸಾವಿರ ಕೋಟಿ ರೂ ಗಳನ್ನು ಕೊಟ್ಟಿರುವಾಗ ಈ ಕಾವೇರಿ ನಿಗಮಕ್ಕೆ ಕೇವಲ 450 ಕೋಟಿ ರೂ ಗಳನ್ನು ಕೊಟ್ಟಿರುವುದು ಬಹಳ ಕಷ್ಟದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಕಾವೇರಿ ನಿಗಮದಲ್ಲಿ ಸುಮಾರು 100 ಕೋಟಿ ರೂಪಾಯಿ ಇರಿಗೇಷನ್ ಬಿಲ್ ಪೆಂಡಿಂಗ್ ಇದೆ ಸಂಬಳ 60 ಕೋಟಿ ರೂಪಾಯಿ ಇದೆ, 310 ಕೋಟಿ ರೂಪಾಯಿ as on today pending ಇದೆ 1050 ಕೋಟಿ ರೂಪಾಯಿ ಟೆಂಡರ್ ಕರೆದಿದ್ದಾರೆ ಆದರೂ ಸಹ ನಮ್ಮ ಭಾಗದಲ್ಲಿ ಯಾರೂ ಟೆಂಡರ್ ಹಾಕುವುದಕ್ಕೆ ಬರುವುದಿಲ್ಲ ಕಾರಣ ಬಿಲ್ ಪಾಸಾಗುವುದಿಲ್ಲ ಮೂರು-ನಾಲ್ಕು ವರ್ಷಗಳಿಂದ ಬಿಲ್ ಪೆಂಡಿಂಗ್ ಇದೆ 1050 ಕೋಟಿ ರೂಪಾಯಿ ಇವತ್ತು ಟೆಂಡರ್ ಕರೆದು ಪೆಂಡಿಂಗ್ ಇದೆ ನನ್ನ ಕ್ಷೇತ್ರಕ್ಕೆ ನಾನು ಬರುವುದಾದರೆ, ಒಂದು ಅಕ್ವಿಡಕ್ಟ್ ಆದರೆ ಸುಮಾರು 22,000 ಎಕರೆ ಇರಿಗೇಷನ್ ಆಗುತ್ತದೆ ಆದರೆ ಎಂ ಡಿ ಯವರು ಒಂದು ಪತ್ರ ಬರೆದಿದ್ದಾರೆ, ಆ ಪತ್ರದಲ್ಲಿ ಎಲ್ಲಾ ಕೆಲಸಗಳನ್ನೂ ಕೂಡಲೇ ಸ್ಥಗಿತ ಮಾಡಿ ಎಂದು ಹೇಳಿದ್ದಾರೆ ಇದು ಬಹಳ ಕಷ್ಟ ನಾನು ಹೇಳುವುದು ಇಷ್ಟೆ ನಾವು ಯಾವು ಪಾಪ ಮಾಡಿದ್ದೇವೆ, ಕಾವೇರಿ ನಿಗಮದ ವ್ಯಾಪ್ತಿಗೆ ಬರತಕ್ಕಂತಹ ಶಾಸಕರು, ರೈತರು ಯಾವ ಪಾಪ ಮಾಡಿದ್ದೇವೆ ಎಂದು ಹೇಳುವುದು ನನಗೆ ಬಹಳ ದುಃಖಕರವಾದ ಸಂಗತಿ ಮುಖ್ಯಮಂತ್ರಿಗಳಾಗಲಿ, ಯಾರೇ ಆಗಲಿ, ಅವರು ಕೇವಲ ಒಂದು ಭಾಗಕ್ಕೆ ಸೀಮಿತವಾಗಬಾರದು ಎನ್ನುವುದು ನನ್ನ ಅನಿಸಿಕೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು, ಈ ಕಾವೇರಿ ನಿಗಮಕ್ಕೆ ಕೊಟ್ಟಿರುವಂತಹ